ನಕ್ಕುಬಿಡಿ



## ಸ್ವರ್ಗಕ್ಕೆ ಲಗ್ಗೆ

ಗುರೂಜಿ: 'ಸ್ವರ್ಗಕ್ಕೆ ಹೋಗಲು ಬಯಸುವವರು ಮುಂದಕ್ಕೆ ಬನ್ನಿ.' ಎಲ್ಲರೂ ಮುಂದಕ್ಕೆ ಹೋಗುವರು, ಒಬ್ಬನನ್ನು ಬಿಟ್ಟು. ಅವನನ್ನು ಉದ್ದೇಶಿಸಿ ಗುರೂಜಿ, 'ಏಕಪ್ಪ ನಿನಗೆ ಹೋಗಲು ಇಷ್ಟವಿಲ್ಲವೆ?'

'ಈ ಕ್ಷಣವೇ ಬೇಡ' ಎಂದು ಉಸುರಿದ!

★★★

## ಚಿಲ್ಲರೆ ಅಭಾವ

ದಂತ ವೈದ್ಯರು ರೋಗಿಗೆ, 'ನೀವು ಕೊಟ್ಟ ನೋಟಿಗೆ ಚಿಲ್ಲರೆ ಇಲ್ಲ. ಇನ್ನೊಂದು ಹಲ್ಲು ಕೀಳಲೇ?'

★★★

## ಮರೆಗುಳಿ

ರೋಗಿ: ವೈದ್ಯರೇ, ನನಗೆ ಜ್ಞಾಪಕ ಶಕ್ತಿ ಪೂರ್ಣ ಹೋಗಿದೆ! ಈಗ ಹೇಳಿದ್ದನ್ನು ಈಗಲೇ ಮರೆಯುತ್ತೇನೆ!

ವೈದ್ಯ: ಕುಳಿತುಕೊಳ್ಳಿ. ಯಾವಾಗಲಿಂದ ಈ ಸಮಸ್ಯೆ?

ರೋಗಿ: ಯಾವ ಸಮಸ್ಯೆ?

(ಸಂಗ್ರಹ) **ಎಸ್.ಆರ್.ದೇವಪ್ರಕಾಶ್, ತುಮಕೂರು.**

ಹೆಂಡತಿ: ನಿಮ್ಮ ಸ್ನೇಹಿತ ಆ ಮೂರ್ಖ ಹುಡುಗೀನ ಮದುವೆಯಾಗುವುದಕ್ಕೆ ಹೊರಟ್ಟಿದ್ದಾನೆ. ನೀವು ಅವನಿಗೆ ಹೇಳಿ ಅದನ್ನು ತಪ್ಪಿಸಬಾರದಾ?

ಗಂಡ: ನಾನು ಯಾಕೆ ಹೇಳಲಿ? ಅವನೇನು ನನಗೆ ಹೇಳಿ ನನ್ನ ಮದುವೇನ ನಿಲ್ಲಿಸಿದ್ದನಾ?

★★★



ಗುಂಡ ಮತ್ತು ಅವನ ಹೆಂಡತಿ ದಂತ ವೈದ್ಯನ ಬಳಿ ಹೋಗಿದ್ದರು.

ಗುಂಡನ ಹೆಂಡತಿ: ಡಾಕ್ಟ್ರೇ ಒಂದು ತಿಂಗಳಿನಿಂದ ಹಲ್ಲು ಅಲ್ಲಾಡ್ತಾ ಇದೆ. ಅನಸ್ಥೇಶಿಯಾ ಏನೂ ಬೇಡ. ಚಿಮುಟದಿಂದ ಎಳೆದುಬಿಡಿ. ಸಾಕು.

ದಂತ ವೈದ್ಯ: ಶಹಬ್ಬಾಸ್! ಮೆಚ್ಚಿದೆ ನಿಮ್ಮ ಧೈರ್ಯವನ್ನು. ಎಲ್ಲಿ ನೋಡೋಣ ಆ ಹಲ್ಲನ್ನು.

ಗುಂಡನ ಹೆಂಡತಿ (ಗುಂಡನ ಕಡೆ ತಿರುಗಿ) ರೀ ಏನು ನೋಡ್ತಾ ಇದೀರಿ? ಬಾಯಿ ತೆಗೆಯಿರಿ ಬೇಗ.

★★★

ಉಪಾಧ್ಯಾಯರು: ಒಂದು ಕೆಲಸವನ್ನು ಒಬ್ಬ ಹೆಂಗಸು ಒಂದು ಗಂಟೆಯಲ್ಲಿ ಮುಗಿಸಿದರೆ, ಅದೇ ಕೆಲಸವನ್ನು ನಾಲ್ವರು ಹೆಂಗಸರು ಒಟ್ಟಿಗೆ ಕೂಡಿ ಮಾಡಿದರೆ ಎಷ್ಟು ವೇಳೆ ಬೇಕಾಗುತ್ತದೆ?'

ಗುಂಡ: ನಾಲ್ಕು ಗಂಟೆ.

ಉಪಾಧ್ಯಾಯರು: ತಪ್ಪು ಕಾಲು ಗಂಟೆ ಸಾಕು. ನಿನಗೆ ಲೆಕ್ಕ ಗೊತ್ತಿಲ್ಲ.

ಗುಂಡ: ಸಾರ್ ನಿಮಗೆ ಲೆಕ್ಕ ಗೊತ್ತು. ಆದರೆ ಹೆಂಗಸರ ಬಗ್ಗೆ ಗೊತ್ತಿಲ್ಲ.

★★★

ಗುಂಡ: ತುಂಬಾ ಸೊಗಸಾಗಿ ಅಕ್ಕಿ ರೊಟ್ಟಿ ಮಾಡ್ತೀನಿ ಅಂತ ಜಂಭ ಕೊಚ್ಚಿಕೊಳ್ತಾ ಇರ್ತೀಯಾ! ಆದರೆ ಈ ರೊಟ್ಟಿ ಒಣಗಿದ ಚಕ್ಕಳ ಇದ್ದ ಹಾಗಿದೆಯಲ್ಲೇ!

ಹೆಂಡತಿ: ನೀವು ಕಡೀತಾ ಇರೋದು ಕಾಗದದ ಪ್ಲೇಟು! ರೊಟ್ಟಿ ಇನ್ನೂ ಕಾವಲಿ ಮೇಲೇ ಇದೇರೀ!

★★★

ಲೇಖಕ: ಈ ಬೃಹತ್ ಕಾದಂಬರಿಯನ್ನು ನನ್ನ ಪ್ರೀತಿಯ ಹೆಂಡತಿಗೆ ಅರ್ಪಿಸಿದ್ದೇನೆ.

ಸಂದರ್ಶಕ: ಅರೆ ಹೌದಾ? ಕಾರಣ?

ಲೇಖಕ: ಒಂದು ವರ್ಷ ಅವಳು ತನ್ನ ತವರು ಮನೆಗೆ ಹೋಗಿ ಸಹಕರಿಸಿದ್ದಾಳೆ. ಅದಕ್ಕೆ.

(ಸಂಗ್ರಹ): **ಎಂ.ಕೆ. ಮಂಜುನಾಥ್, ಬೆಂಗಳೂರು**


**ವಶೀಕರಣದಲ್ಲಿ ಚಾಲೆಂಜ್**



**ವ್ಯಾಪಾರ, ಶತ್ರುನಾಶ, ವಶೀಕರಣಗಳಿಗೆ ಸ್ಪೆಷಲಿಸ್ಟ್ ಜ್ಯೋತಿಷ್ಯರು**

ಪ್ರಖ್ಯಾತ ಕಾಶಿ ಗುರುಗಳಾದ ದೇವಿ ಭಕ್ತ, ಅಘೋರಿನಾಥ್ ರವರ ಆತ್ಮೀಯ ಶಿಷ್ಯರಾದ ಮಾಂತ್ರಿಕ ಶ್ರೀ ಎನ್. ಲಕ್ಷ್ಮಣ ರಾವ್ ಇವರು ಸತತ **25** ವರ್ಷಗಳ ಕಠೋರ ಸಾಧನೆಯಿಂದ ನಾಗ ಅಘೋರಿಗಳ ಕೇರಳದ ಸರ್ವಮಂತ್ರ ವಿದ್ಯೆಗಳನ್ನು ಸಿದ್ಧಿಪಡಿಸಿಕೊಂಡು ತಮ್ಮ ವಶದಲ್ಲಿ ಇರಿಸಿಕೊಂಡಿದ್ದಾರೆ.

ಇವರು ನಿಮ್ಮ ಭವಿಷ್ಯ, ಉದ್ಯೋಗ, ವ್ಯಾಪಾರ, ವಿವಾಹ, ಸಂತಾನ, ಆರ್ಥಿಕ, ದಾಂಪತ್ಯ ಕಲಹ, ವಿದ್ಯೆ, ಮಾಟಮಂತ್ರ, ಆರೋಗ್ಯ, ಸಂಪತ್ತು, ಮನಃಶಾಂತಿ, ಶತ್ರುನಾಶ, ಸ್ತ್ರೀ ವಶೀಕರಣ, ಪುರುಷ ವಶೀಕರಣ, ಜನವಶೀಕರಣ, ಲಕ್ಷ್ಮೀವಶೀಕರಣ, ಶತ್ರು ವಶೀಕರಣ ಇನ್ನು ಯಾವುದೇ ಕಠಿಣ ಸಮಸ್ಯೆಗಳಿಗೆ ಕೆಲವೇ ದಿನದಲ್ಲಿ ಪರಿಹಾರ ಶತಸಿದ್ಧ. ನಿಮ್ಮೆಲ್ಲಾ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು.

**ಶ್ರೀ ರಾಘವೇಂದ್ರ ಸ್ವಾಮಿ ಜ್ಯೋತಿಷ್ಯಂ**

**ಪಂ: ಶ್ರೀ ಎನ್.ಲಕ್ಷ್ಮಣ್‌ರಾವ್**

ಗೋಲ್ಡನ್ ಆರ್ಕೇಡ್, 1ನೇ ಮಹಡಿ, ಎಂಪಯರ್ ಮಾಲ್ ಎದುರುಗಡೆ, ಎಮ್. ಜಿ. ರೋಡ್, ಕೊಡಿಯಾಲ್‌ಬೈಲ್, ಮಂಗಳೂರು.

**9900998178**

ನೇರವಾಗಿ ಭೇಟಿಯಾಗಲು ಅನುಕೂಲ ಇಲ್ಲದವರು ಫೋನ್ ಅಥವಾ ಪತ್ರದ ಮೂಲಕ ವ್ಯವಹರಿಸಬಹುದು